# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1270 |
| ಸದಸ್ಯರ ಹೆಸರು | ಶ್ರೀ ರಮೇಶ್ ಬಾಬು |
| ಉತ್ತರಿಸುವ ದಿನಾಂಕ | 17.12.2025 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

********

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ಭೂ ಸುಧಾರಣಾ ಕಾಯ್ದೆ ಅಡಿಯಲ್ಲಿ ಇನಾಂಯೇತರ ಜಮೀನುಗಳು ಸರ್ಕಾರದಲ್ಲಿ ವಿಹಿತವಾದ ಪ್ರಕರಣಗಳಲ್ಲಿ ಧಾರ್ಮಿಕ ಸಂಸ್ಥೆಗಳಿಗೆ ಪರಿಹಾರಾರ್ಥವಾಗಿ, ವಾರ್ಷಿಕವಾಗಿ ಸರ್ಕಾರ ಎಷ್ಟು ಹಣ ಪಾವತಿ ಮಾಡುತ್ತಿದೆ; ರಾಜ್ಯದಲ್ಲಿ ಎಷ್ಟು ದೇವಾಲಯಗಳು ಇದರ ಲಾಭವನ್ನು ಪಡೆಯುತ್ತಿವೆ; | ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ಅಡಿಯಲ್ಲಿ ಇನಾಂಯೇತರ ಜಮೀನುಗಳು ಸರ್ಕಾರದಲ್ಲಿ ವಿಹಿತವಾದ ಪ್ರಕರಣಗಳಲ್ಲಿ ಧಾರ್ಮಿಕ ಸಂಸ್ಥೆಗಳಿಗೆ ಪರಿಹಾರಾರ್ಥವಾಗಿ ವರ್ಷಾಸನ ಯೋಜನೆಯಡಿ ಅನುದಾನವನ್ನು ನಿಗಧಿಪಡಿಸಿದ್ದು, ಧಾರ್ಮಿಕ ದತ್ತಿ ಇಲಾಖಾ ವತಿಯಿಂದ ಬಿಡುಗಡೆ ಮಾಡಲಾಗುತ್ತಿರುವ ವಿವರ ಕೆಳಕಂಡಂತಿದೆ:- (ಕೋಷ್ಟಕ 1 ನೋಡಿ) |
| (ಆ) | ಮುಜರಾಯಿ ಇಲಾಖೆ ಅಡಿಯಲ್ಲಿ ಬರುವ ದೇವಾಲಯಗಳಿಗೆ ನೀಡುತ್ತಿರುವ ತಸ್ತಿಕ್ ಭತ್ಯೆ ಎಷ್ಟು; ರಾಜ್ಯದ ಎಷ್ಟು ದೇವಾಲಯಗಳಲ್ಲಿ ಇದರ ಪ್ರಯೋಜನ ನೀಡಲಾಗುತ್ತಿದೆ; | ಕರ್ನಾಟಕ (ಮತೀಯ ಮತ್ತು ಧರ್ಮಾದಾಯ) ಇನಾಂ ರದ್ದಿಯಾತಿ ಕಾಯ್ದೆ 1955 ರನ್ವಯ ಅಡಿಯಲ್ಲಿ ಇನಾಂ ಜಮೀನುಗಳು ಸರ್ಕಾರದಲ್ಲಿ ವಿಹಿತವಾದ ಪ್ರಕರಣಗಳಲ್ಲಿ ಧಾರ್ಮಿಕ ಸಂಸ್ಥೆಗಳಿಗೆ ಪರಿಹಾರಾರ್ಥವಾಗಿ ತಸ್ತೀಕ್ ಯೋಜನೆಯಡಿ ಅನುದಾನವನ್ನು ನಿಗಧಿಪಡಿಸಿದ್ದು, ಧಾರ್ಮಿಕ ದತ್ತಿ ಇಲಾಖಾ ವತಿಯಿಂದ ಬಿಡುಗಡೆ ಮಾಡಲಾಗುತ್ತಿರುವ ವಿವರ ಕೆಳಕಂಡಂತಿದೆ: (ಕೋಷ್ಟಕ 2 ನೋಡಿ) |
| (ಇ) | ಮುಜರಾಯಿ ಇಲಾಖೆಯ ವತಿಯಿಂದ ಕೈಲಾಸ ಮಾನಸ ಸರೋವರ ಯಾತ್ರೆಗೆ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಪ್ರೋತ್ಸಾಹ ಧನವನ್ನು ನೀಡಲಾಗಿದೆ; ಯಾತ್ರಾರ್ಥಿಗಳಿಗೆ | ಕಳೆದ ಎರಡು ವರ್ಷಗಳಲ್ಲಿ ಕರ್ನಾಟಕ ರಾಜ್ಯದಿಂದ ಕೈಲಾಸ ಮಾನಸ ಸರೋವರ ಯಾತ್ರೆ ಕೈಗೊಂಡ ಯಾತ್ರಾರ್ಥಿಗಳಿಂದ ಸರ್ಕಾರದ ಸಹಾಯಧನ/ಪ್ರೋತ್ಸಾಹಧನಕ್ಕಾಗಿ ಯಾವುದೇ ಅರ್ಜಿಗಳು ಸ್ವೀಕೃತವಾಗದೇ ಇರುವುದರಿಂದ, ಸದರಿ ಸಾಲುಗಳಲ್ಲಿ ಯಾವುದೇ ಪ್ರೋತ್ಸಾಹ ಧನ ನೀಡಿರುವುದಿಲ್ಲ. |

(ಅ) ಉತ್ತರದ ಕೋಷ್ಟಕ 1:

| ಕ್ರ.ಸ | ವಿವರ | ಸಂಸ್ಥೆಗಳ ಸಂಖ್ಯೆ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1. | ತಲಾ ರೂ.72,000/-ಗಳಂತೆ ವರ್ಷಾಸನ ಅನುದಾನ ಪಡೆಯುತ್ತಿರುವ ಧಾರ್ಮಿಕ ಸಂಸ್ಥೆಗಳು | 3484 | 2090.40 |
| 2. | ರೂ.60,000/-ಗಳ ಮೇಲ್ಪಟ್ಟು ವರ್ಷಾಸನ ಅನುದಾನ ಪಡೆಯುತ್ತಿರುವ ಧಾರ್ಮಿಕ ಸಂಸ್ಥೆಗಳು | 24 | 32.74 |
| | **ಒಟ್ಟು** | **3508** | **2123.14** |

(ಆ) ಉತ್ತರದ ಕೋಷ್ಟಕ 2:

| ಕ್ರ.ಸ | ವಿವರ | ಸಂಸ್ಥೆಗಳ ಸಂಖ್ಯೆ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1. | ತಲಾ ರೂ.72,000/-ಗಳಂತೆ ತಸ್ತೀಕ್ ಅನುದಾನ ಪಡೆಯುತ್ತಿರುವ ಧಾರ್ಮಿಕ ಸಂಸ್ಥೆಗಳು | 25117 | 18084.24 |
| 2. | ರೂ.72,000/-ಗಳ ಮೇಲ್ಪಟ್ಟು ತಸ್ತೀಕ್ ಅನುದಾನ ಪಡೆಯುತ್ತಿರುವ ಧಾರ್ಮಿಕ ಸಂಸ್ಥೆಗಳು | 54 | 168.32 |
| | **ಒಟ್ಟು** | **25171** | **18252.56** |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td>ತಲಾ ನೀಡುತ್ತಿರುವ ಧನಸಹಾಯ ಎಷ್ಟು;</td><td>ಕರ್ನಾಟಕ ರಾಜ್ಯದಿಂದ ಕೈಲಾಸ ಮಾನಸ ಸರೋವರ ಯಾತ್ರೆ ಕೈಗೊಂಡ ಅರ್ಹ ಯಾತ್ರಾರ್ಥಿಗಳಿಗೆ ಸರ್ಕಾರದ ಮಾರ್ಗಸೂಚಿಯನ್ವಯ ತಲಾ ರೂ.30,000/-ಗಳ ಸಹಾಯಧನ /ಪ್ರೋತ್ಸಾಹಧನವನ್ನು ಧಾರ್ಮಿಕ ದತ್ತಿ ಇಲಾಖೆಯ ವತಿಯಿಂದ ನೀಡಲಾಗುತ್ತಿದೆ.</td></tr>
<tr><td>(ಈ)</td><td>ಮುಜರಾಯಿ ಇಲಾಖೆಯ ವತಿಯಿಂದ ಚಾರ್ ಧಾಮ್ ಯಾತ್ರೆಗೆ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಪ್ರೋತ್ಸಾಹಧನ ವಿತರಿಸಲಾಗಿದೆ; ನೀಡುತ್ತಿರುವ ಧನಸಹಾಯ ಎಷ್ಟು;</td><td>ಕಳೆದ ಎರಡು ವರ್ಷಗಳಲ್ಲಿ ಕರ್ನಾಟಕ ರಾಜ್ಯದಿಂದ ಚಾರ್‌ಧಾಮ್ ಯಾತ್ರೆ ಕೈಗೊಂಡ ಯಾತ್ರಾರ್ಥಿಗಳಿಗೆ ಧಾರ್ಮಿಕ ದತ್ತಿ ಇಲಾಖೆಯ ವತಿಯಿಂದ ನೀಡಲಾದ ಸಹಾಯಧನ / ಪ್ರೋತ್ಸಾಹಧನದ ವಿವರಗಳು ಕೆಳಕಂಡಂತಿದೆ:
<table>
<tr><th>ಆರ್ಥಿಕ ಸಾಲು</th><th>ನೀಡಲಾದ ಪ್ರೋತ್ಸಾಹ ಧನದ ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ)</th></tr>
<tr><td>2023-24</td><td>562.60</td></tr>
<tr><td>2024-25</td><td>716.80</td></tr>
</table>
ಕರ್ನಾಟಕ ರಾಜ್ಯದಿಂದ ಚಾರ್‌ಧಾಮ್ ಯಾತ್ರೆ ಕೈಗೊಂಡ ಅರ್ಹ ಯಾತ್ರಾರ್ಥಿಗಳಿಗೆ ಸರ್ಕಾರದ ಮಾರ್ಗಸೂಚಿಯನ್ವಯ ತಲಾ ರೂ.20,000/-ಗಳ ಸಹಾಯಧನ / ಪ್ರೋತ್ಸಾಹಧನವನ್ನು ಧಾರ್ಮಿಕ ದತ್ತಿ ಇಲಾಖೆಯ ವತಿಯಿಂದ ನೀಡಲಾಗುತ್ತಿದೆ.</td></tr>
<tr><td>(ಉ)</td><td>ಮುಜರಾಯಿ ಇಲಾಖೆಯ ವತಿಯಿಂದ 'ಸಿ' ಕೆಟಗರಿ ದೇವಾಲಯಗಳಿಗೆ ದೈನಂದಿನ ಪೂಜಾ ಕಾರ್ಯಗಳಿಗೆ ಸರ್ಕಾರ ನೀಡುತ್ತಿರುವ ನಗದು ಸಹಾಯಧನ ಎಷ್ಟು; ಕಳೆದ ಎರಡು ವರ್ಷಗಳಲ್ಲಿ ಎಷ್ಟು ಸಹಾಯಧನ ಬಿಡುಗಡೆ ಮಾಡಲಾಗಿದೆ?</td><td>ರಾಜ್ಯದ ಕೆಲವು ದೇವಸ್ಥಾನ ಹಾಗೂ ಇತರೆ ಧಾರ್ಮಿಕ ಸಂಸ್ಥೆಗಳ ಪೂಜಾ ಕೈಂಕರ್ಯಗಳಿಗೆ ಸರ್ಕಾರದಿಂದ ನಗದು ಸಹಾಯಾನುದಾನ ಯೋಜನೆಯಡಿಯಲ್ಲಿ ಸಹಾಯ ಅನುದಾನವನ್ನು ನೀಡಲಾಗುತ್ತಿದ್ದು, 2023-24ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ 327 ರಲ್ಲಿನ ಘೋಷಣೆಯಂತೆ ಧಾರ್ಮಿಕ ದತ್ತಿ ಇಲಾಖೆಗೆ ಸೇರಿರುವ ಪ್ರವರ್ಗ "ಸಿ" ವರ್ಗದ 121 ದೇವಸ್ಥಾನಗಳಿಗೆ ಸಮಾನವಾಗಿ ರೂ.15,000/- ಗಳ ಸಹಾಯಾನುದಾನವನ್ನು ಮಂಜೂರು ಮಾಡಲು ಆದೇಶಿಸಲಾಗಿರುತ್ತದೆ.<br><br>ಕಳೆದ 02 ವರ್ಷಗಳಲ್ಲಿ ಬಿಡುಗಡೆ ಮಾಡಲಾದ ನಗದು ಸಹಾಯಾನುದಾನದ ವಿವರ ಕೆಳಕಂಡಂತಿದೆ:
<table>
<tr><th>ಕ್ರ.ಸ</th><th>ವರ್ಷ</th><th>ಸಂಸ್ಥೆಗಳ ಸಂಖ್ಯೆ</th><th>ಮೊತ್ತ (ರೂ.ಲಕ್ಷಗಳಲ್ಲಿ)</th></tr>
<tr><td rowspan="2">1.</td><td rowspan="2">2023-24</td><td>ತಲಾ ರೂ.15,000/-ಗಳಂತೆ ಒಟ್ಟು 121 ಸಂಸ್ಥೆಗಳು</td><td>18.15</td></tr>
<tr><td>01 ಸಂಸ್ಥೆಗೆ ರೂ.25,000/-ಗಳು</td><td>0.25</td></tr>
<tr><td>2.</td><td>2024-25</td><td>01 ಸಂಸ್ಥೆಗೆ ರೂ.25,000/-ಗಳು</td><td>0.25</td></tr>
<tr><td colspan="2">ಒಟ್ಟು</td><td>123</td><td>18.65</td></tr>
</table></td></tr>
</table>

ಸಂಖ್ಯೆ: ಕಂಇ 208 ಮುಸಪ್ರ 2025

**(ರಾಮಲಿಂಗಾರೆಡ್ಡಿ)**
**ಸಾರಿಗೆ ಮತ್ತು ಮುಜರಾಯಿ ಸಚಿವರು**